

بِسۡمِ اللّٰہِ الرَّحۡمٰنِ الرَّحِیۡمِ

# ಸಾಹಿಬ್‌ಝಾದ ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **19-01-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಎರಡು ದಿನಗಳ ಹಿಂದೆ, ನಮ್ಮ ಜಮಾಅತಿಗೆ ದೀರ್ಘಕಾಲದಿಂದ ಸೇವೆಸಲ್ಲಿಸುತ್ತಿದ್ದ ಮುಹ್ತರಮ್ ಸಾಹಿಬ್‌ಝಾದ ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರು ನಿಧನ ಹೊಂದಿದರು -إِنَّا لِلّٰهِ وَإِنَّا إِلَيْهِ رَاجِعُونَ . ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಆಧ್ಯಾತ್ಮಿಕ ಸಂಬಂಧವೂ ಕೌಟುಂಬಿಕ ಸಂಬಂಧವೂ ಲಭಿಸಿತ್ತು. ಈ ಲೋಕಕ್ಕೆ ಆಗಮಿಸಿದವನು ಅನಂತರ ಒಂದು ದಿನ ಈ ಲೋಕ ಬಿಟ್ಟು ಹೋಗಬೇಕಾಗಿದೆ ಎನ್ನುವುದು ಅಲ್ಲಾಹನ ನಿಯಮವಾಗಿದೆ. ಎಲ್ಲವೂ ನಶ್ವರವಾಗಿದೆ. ಶಾಶ್ವತವಾಗಿ ಬಾಕಿಯಾಗಿ ಉಳಿಯುವುದು ಅಲ್ಲಾಹನ ಅಸ್ತಿತ್ವ ಮಾತ್ರವಾಗಿದೆ. ಅಲ್ಲಾಹನು ನೀಡಿರುವ ಲೌಕಿಕ ಜೀವಿತವನ್ನು ಉತ್ತಮ ಉದ್ದೇಶಕ್ಕೋಸ್ಕರ ವಿನಿಯೋಗಿಸಲು ಪ್ರಯತ್ನ ಮಾಡುವವರು, ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನಿಸುವವರು ಭಾಗ್ಯಶಾಲಿಗಳಾಗಿದ್ದಾರೆ. ಒಬ್ಬ ಸಾತ್ವಿಕನೊಂದಿಗೆ, ಸಂತನೊಂದಿಗೆ, ಅಥವಾ ಪ್ರವಾದಿಯೊಂದಿಗೆ ಕೌಟುಂಬಿಕ ಸಂಬಂಧ ಹೊಂದುವುದರಿಂದ ಮಾತ್ರ ಒಬ್ಬನ ಜೀವಿತವನ್ನು ಉತ್ತಮ ಉದ್ದೇಶವುಳ್ಳದ್ದಾಗಿ ಮಾಡಲಾರದೆಂದು ಮತ್ತು ಅಲ್ಲಾಹನ ಸಂಪ್ರೀತಿ ಗಳಿಸುವಂತೆ ಮಾಡಲಾರದೆಂದು ಅವರು ಮನವರಿಕೆ ಮಾಡಿಕೊಂಡಿರುತ್ತಾರೆ. ಮನುಷ್ಯನು ಮಾಡುವ ಕರ್ಮಗಳು ಮಾತ್ರ ಅಲ್ಲಾಹನ ಸಂಪ್ರೀತಿ ಗಳಿಸುವಂತೆ ಮಾಡುವುದು.

ನಾನು ಸ್ವತಃ ಅವರ ಬಗ್ಗೆ ತಿಳಿದಿರುವೆನು. ನನಗೆ ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರೊಂದಿಗೆ ಬಹಳ ಗಾಢವಾದ ವೈಯ್ಯಕ್ತಿಕ ಸಂಬಂಧವಿತ್ತು. ನನಗೆ ಅವರನ್ನು ಚೆನ್ನಾಗಿ ವೀಕ್ಷಿಸುವ ಸಂದರ್ಭ ಲಭಿಸಿತ್ತು. ಅವರು ತಮ್ಮ ವಕ್ಫ್ ಜೀವಿತವನ್ನು ಮತ್ತು ಕೆಲಸವನ್ನು ಬಹಳ ವಿನಯದಿಂದ ನಿಭಾಯಿಸಲು ಪ್ರಯತ್ನಿಸುತ್ತಿದ್ದರು. ಅವರು ಯಾವತ್ತೂ ತಮ್ಮ ಕೌಟುಂಬಿಕ ಸಂಬಂಧದ ಹೆಮ್ಮೆ ಪ್ರಕಟಿಸಲಿಲ್ಲ. ಅವರು ಕಳೆದ ವರ್ಷದ ಜಲ್ಸಕ್ಕೆ ಲಂಡನ್‌ಗೆ ಆಗಮಿಸಿದ್ದರು. ಅಂತಿಮಗತಿ ಉತ್ತಮವಾಗುವ ಕುರಿತು ಚಿಂತೆಯನ್ನು ನನ್ನೊಂದಿಗೆ ಹಂಚಿಕೊಂಡಿದ್ದರು.

ಅವರು ವಕ್ಫ್‌ನ ಆತ್ಮವನ್ನು ಅರಿತುಕೊಂಡು ಕೆಲಸ ಮಾಡುತ್ತಿದ್ದ ಹಿರಿಯರಾಗಿದ್ದರು. ಅವರ ಪ್ರಾಯ 85 ಆಗಿತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮರಿಮೊಮ್ಮಗನೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಿರಿಯ ಮಗ ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್‌ರವರ ಮೊಮ್ಮಗನೂ ಆಗಿದ್ದರು. ಅವರ ತಂದೆ ಹಝ್ರತ್ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು, ತಮ್ಮ ಪಿತನಿಗಿಂತ ಮೊದಲೇ ಬೈಅತ್ ಮಾಡಿದ್ದರು.

ಮಿರ್ಝಾ ಖುರ್ಷಿದ್ ಅಹ್ಮದ್ ಸಾಹಿಬರು 1932 ಸೆಪ್ಟಂಬರ್ 12ರಂದು ಲಾಹೋರಿನಲ್ಲಿ ಜನಿಸಿದರು. 1945 ಎಪ್ರಿಲ್ 21ರಂದು ತನ್ನ ಪ್ರಾಯ ಹನ್ನೆರಡೂವರೆ ವರ್ಷವಾಗಿದ್ದಾಗ ವಕ್ಫೇ ಝಿಂದಗಿಯ ಫಾರ್ಮ್ ಭರ್ತಿ ಮಾಡಿದ್ದರು. ಆಗ ಅವರು ಒಂಬತ್ತನೆಯ ಕ್ಲಾಸಿನಲ್ಲಿದ್ದರು. ಅವರು ಖಾದಿಯಾನಿನ ಹೈಸ್ಕೂಲಿನಲ್ಲಿ ಮೆಟ್ರಿಕ್ ಪಾಸ್ ಮಾಡಿದರು. ಅನಂತರ ತಅಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ವ್ಯಾಸಾಂಗ ಮುಂದುವರಿಸಿದರು. ಅನಂತರ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅಲ್‌ಹುರವರ ಸಲಹೆ ಮೇರೆಗೆ ಲಾಹೋರಿನ ಸರಕಾರಿ ಕಾಲೇಜಿನಲ್ಲಿ ಎಂ.ಎ. ಇಂಗ್ಲಿಷ್ ಅಧ್ಯಯನ ಮಾಡಿದರು. 1956 ಸೆಪ್ಟಂಬರ್ 10ರಂದು ವಾಕಿಫೆ ಝಿಂದಗಿಯಾಗಿ ರಬ್ವದ ಟಿ.ಐ. ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದರು. ಅವರು 17 ವರ್ಷಗಳ ಕಾಲ ಆ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅವರು ಬಹಳ ಕಷ್ಟಪಟ್ಟು ತಮ್ಮ ಲೆಕ್ಚರ್ ಸಿದ್ಧಪಡಿಸುತ್ತಿದ್ದರು. ನಾನು ಸಹ ಅವರ ವಿಧ್ಯಾರ್ಥಿಯಾಗಿದ್ದೆ. ಅವರಿಂದ ಕಲಿತ ಅನೇಕ ಶಿಷ್ಯರು ನನಗೆ ಬರೆದಿದ್ದಾರೆ: ಅವರು ಬಹಳ ಕಷ್ಟಪಟ್ಟು ಪಾಠ ಸಿದ್ಧಪಡಿಸುತ್ತಿದ್ದರು ಮತ್ತು ಬಹಳ ಕಷ್ಟಪಟ್ಟು ಕಲಿಸುತ್ತಿದ್ದರೆಂದು. ಅವರಿಗೆ ತಾವು ಕಲಿಸುತ್ತಿದ್ದ ವಿಷಯದ ಬಗ್ಗೆ ಪರಿಪೂರ್ಣ ಜ್ಞಾನವಿತ್ತು. ಆದುದರಿಂದ ವಿದ್ಯಾರ್ಥಿಗಳು ಅವರನ್ನು ಬಹಳ ಇಷ್ಟಪಡುತ್ತಿದ್ದರು. 1964ರಲ್ಲಿ ಅವರಿಗೆ ಇಂಗ್ಲಿಷ್ ಫಿನೇಟಿಕ್ ಕೋರ್ಸ್ ಮಾಡಲು ಬ್ರಿಟಿಷ್ ಕೌನ್ಸಿಲ್‌ನಿಂದ ಸ್ಕೋಲರ್‌ಶಿಪ್ ಲಭಿಸಿತ್ತು. ಹಾಗೆ ಅವರು ಇಂಗ್ಲೆಂಡಿಗೆ ಬಂದು ಲೀಡ್ಸ್ ಯುನಿವರ್ಸಿಟಿಯಲ್ಲಿ ಒಂದು ವರ್ಷ ವ್ಯಾಸಂಗ ಮಾಡಿದರು.

ಅವರು ಜಮಾಅತ್‌ಗೆ ಮಾಡಿದ ಕೆಲವು ಸೇವೆಗಳ ಬಗ್ಗೆ ವಿವರಣೆ ನೀಡುವೆನು. 1974ರ ಪ್ರಕ್ಷುಬ್ಧ ಪರಿಸ್ಥಿತಿಯ ಕಾಲದಲ್ಲಿ ಮುಕರ್‌ರಮ್ ಸಾಹಿಬ್‌ಝಾದ ಖುರ್ಷಿದ್ ಅಹ್ಮದ್ ಸಾಹಿಬರು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರಿಗೆ ಸಹಾಯಕರಾಗಿದ್ದರು. ಅವರು ಎರಡು ಮೂರು ತಿಂಗಳ ಕಾಲ ಎಲ್ಲಾ ಸಮಯದಲ್ಲಿಯೂ ಖಸ್ರೆ ಖಿಲಾಫತ್‌ನಲ್ಲಿ ವಾಸಿಸಿ ಖಲೀಫರಿಗೆ ಸೇವೆ ಸಲ್ಲಿಸುತ್ತಿದ್ದರು.

ಅದೇ ರೀತಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಮಂಜೂರಾತಿ ಮೇರೆಗೆ ರಬ್ವದಲ್ಲಿ ಅನಾಥ ಮತ್ತು ನಿರ್ಗತಿಕ ಮಕ್ಕಳಿಗೋಸ್ಕರ, ಅವರಿಗೆ ಶಿಕ್ಷಣ ನೀಡಲು ಮತ್ತು ಮೇಲ್ವಿಚಾರಣೆ ನಡೆಸಲು 1962ರ ಮಧ್ಯಭಾಗದಲ್ಲಿ 'ಅನ್ನುಸ್ರತ್' ಎಂಬ ವಸತಿಗೃಹವನ್ನು ಸ್ಥಾಪಿಸಲಾಗಿತ್ತು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹುರವರು ಅದಕ್ಕೆ 'ಮದ್ದೆ ಇಮ್‌ದಾದೆ ತಲಬ' ಎಂದು ಹೆಸರಿರಿಸಿದ್ದರು.

1978ರಿಂದ 1983 ಜುಲಾಯಿ ತನಕ ಸಾಹಿಬ್‌ಝಾದ ಸಾಹಿಬರು ಅದರ ಮೇಲ್ವಿಚಾರಕರಾಗಿದ್ದರು.

1973 ಎಪ್ರಿಲ್ 30ರಿಂದ ಅವರು ನಾಝಿರ್ ಖಿದ್‌ಮತೆ ದರ್‌ವೇಶಾನ್ ಆಗಿ ನೇಮಿಸಲ್ಪಟ್ಟರು. 1976 ಮೇ ಒಂದರಿಂದ 1988ರ ವರೆಗೆ ಅವರು ಎಡಿಶನ್ ನಾಝಿರ್ ಅಲ್‌ಲಾ ಆಗಿದ್ದರು. ವಿವಿಧ ಕಮಿಟಿಗಳ ಸದಸ್ಯರಾಗಿ ಸೇವೆ ಸಲ್ಲಿಸುವ ಭಾಗ್ಯ ಸಹ ಅವರಿಗೆ ಲಭಿಸಿದೆ. 1988 ಒಕ್ಟೋಬರ್‌ನಿಂದ 1991 ಸೆಪ್ಟಂಬರ್ ತನಕ ನಾಝಿರ್ ಉಮೂರೆ ಆಮ್ಮ ಆಗಿದ್ದರು. 1992 ಅಗಸ್ಟ್‌ನಿಂದ 2003 ಮೇ ತನಕ ನಾಝಿರ್ ಉಮೂರೆ ಖಾರಿಜ ಆಗಿದ್ದರು. ಅನಂತರ ನನ್ನ ಖಿಲಾಫತ್ ಕಾಲದಲ್ಲಿ ನಾನು ಅವರನ್ನು ನಾಝಿರೆ ಅಲ್‌ಲಾ ಮತ್ತು ಅಮೀರ್ ಮಖಾಮೆ ರಬ್ವ ಆಗಿ ನೇಮಿಸಿದೆ. ಅವರು ಬಹಳ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದರು. ಅವರು ಮಜ್ಲಿಸೆ ಇಫ್ತಾದ ಸದಸ್ಯರೂ ಆಗಿದ್ದರು. ಹನ್ನೆರಡು ಹದಿಮೂರು ವರ್ಷಗಳ ಕಾಲ ಖಝಾ ಬೋರ್ಡಿನ ಸದಸ್ಯರೂ ಆಗಿದ್ದರು. 1973ರಲ್ಲಿ ಹಜ್ ಮಾಡುವ ಭಾಗ್ಯವನ್ನು ಅಲ್ಲಾಹನು ಅವರಿಗೆ ದಯಪಾಲಿಸಿದನು.

ಅವರ ನಿಕಾಹ್ ಖುತ್‌ಬ 1955 ಡಿಸೆಂಬರ್ 26ರಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ನಿರ್ವಹಿಸಿದ್ದರು. ಅವರು ಖುತ್‌ಬದಲ್ಲಿ ಹೇಳಿದರು: 'ಈ ಹುಡುಗ ಸಹ ನಮ್ಮ ಕುಟುಂಬದ ವಕ್ಫ್ ಮಾಡಿದವರಲ್ಲಿ ಒಬ್ಬನಾಗಿದ್ದಾನೆ. ಮಿರ್ಝಾ ಅಝೀಝ್ ಅಹ್ಮದ್ ಸಾಹಿಬರಿಗೆ ಅಲ್ಲಾಹನು ಭಾಗ್ಯನೀಡಿ ಅವರು ತನ್ನ ಈ ಮಗನಿಗೆ ಉನ್ನತ ಶಿಕ್ಷಣ ನೀಡುವಂತೆ ಮಾಡಿದ್ದಾನೆ. ಈಗ ಅವನು ಎಂ.ಎ. ಕಲಿಯುತ್ತಿದ್ದಾನೆ. ಇಂಗ್ಲಿಷ್‌ನಲ್ಲಿ ಎಂ.ಎ. ಪರೀಕ್ಷೆಗೆ ಹಾಜರಾಗಲಿದ್ದಾನೆ. ಅವನು ಇಂಗ್ಲಿಷ್‌ನಲ್ಲಿ ಪ್ರಾವಿಣ್ಯ ಗಳಿಸಿರುವುದಾಗಿ ಹೇಳುತ್ತಾರೆ. ನಂತರ ಈ ಹುಡುಗ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡಲಿ ಎಂದು ನಾನು ಬಯಸುತ್ತೇನೆ. ಭಾಷಾಂತರದ ಕೆಲಸ ಸಹ ಮಾಡಬಹುದಾಗಿದೆ.'

ಅಲ್ಲಾಹನು ಅವರಿಗೆ ಆರು ಗಂಡು ಮಕ್ಕಳನ್ನು ನೀಡಿದ್ದಾನೆ. ಅವರಲ್ಲಿ ನಾಲ್ವರು ವಾಕಿಫ್ ಝಿಂದಗೀ ಆಗಿದ್ದಾರೆ. ಇಬ್ಬರು ಡಾಕ್ಟರ್‌ಗಳಾಗಿದ್ದಾರೆ. ಒಬ್ಬ ಪುತ್ರ ನಝಾರತ್ ತಲ್‌ಲೀಮ್‌ನಲ್ಲಿ ನಾಯಿಬ್ ನಾಝಿರ್ ಆಗಿದ್ದಾರೆ. ಅವರು ಪಿ.ಎಚ್‌ಡಿ ಮಾಡಿದ್ದಾರೆ. ಇನ್ನೊಬ್ಬ ಪುತ್ರ ಮುಶೀರೆ ಖಾನೂನಿ (ನಿಯಮ ಸಲಹೆಗಾರ) ಕಚೇರಿಯಲ್ಲಿ ಅಸಿಸ್ಟೆಂಟ್ ಆಗಿದ್ದಾರೆ. ಅವರು ಲಾ ವಿದ್ಯಾಭ್ಯಾಸ ಮಾಡಿದ್ದಾರೆ.

ಸಾಹಿಬ್‌ಝಾದ ಸಾಹಿಬರು 2000ದಿಂದ 2003ರ ತನಕ ಪಾಕಿಸ್ಥಾನದ ಸದರ್ ಮಜ್ಲಿಸ್ ಅನ್ಸಾರುಲ್ಲಾಹ್ ಆಗಿದ್ದರು. ಅವರ ಒಬ್ಬ ಪುತ್ರ ಡಾಕ್ಟರ್ ಮಿರ್ಝಾ ಸುಲ್ತಾನ್ ಅಹ್ಮದ್ ಬರೆಯುತ್ತಾರೆ: ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರೊಂದಿಗೆ ಬಹಳ ಪ್ರೀತಿ ಇತ್ತು. ಸಾಹಿಬ್‌ಝಾದ ಸಾಹಿಬರು ಕೆಲವು ವರ್ಷಗಳ ಹಿಂದೆ ಓಕಾಡ ಎಂಬಲ್ಲಿಗೆ ಹೋಗಿದ್ದರು. ಅವರನ್ನು ಕರೆದುಕೊಂಡು ಬರಲು ಒಬ್ಬ ಮಗ ಡಾಕ್ಟರ್ ನೂರಿ ಜೊತೆಗೆ ಹೋಗಿದ್ದರು. ಮಾರ್ಗ ಮಧ್ಯದಲ್ಲಿ ಸಾಹಿಬ್‌ಝಾದ ಸಾಹಿಬರ ಭೇಟಿಯಾಯಿತು. ಅವರು ಹೇಳಿದರು: ನಾನು ದಾರಿಯುದ್ದಕ್ಕೂ ಹೀಗೆ ಪ್ರಾರ್ಥಿಸುತ್ತಿದ್ದೆ, ನಾನು ರಬ್ವಕ್ಕೆ ತಲಪಬೇಕು ಹಝ್ರತ್ ಖಲೀಫತುಲ್ ಮಸೀಹರ ಪಾದಗಳಲ್ಲಿ ನನ್ನ ಜೀವ ಹೋಗಲಿ ಎಂದು. ಏಂದರೆ ಅವರು ದಫನ್‌ಗೊಳಿಸಲ್ಪಟ್ಟ ಮತ್ತು ಅವರು ನಿರ್ಮಿಸಿ ಜನನಿಬಿಡಗೊಳಿಸಿದ ಊರಿನಲ್ಲಿ. ಇದು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರೊಂದಿಗೆ ಅವರಿಗಿದ್ದ ಪ್ರೀತಿಯ ಸ್ಥಿತಿ ಆಗಿದೆ.

ಅವರ ಒಬ್ಬ ಪುತ್ರ ಹೇಳುತ್ತಾರೆ: ಅವರು ರೋಗಬಾಧಿತರಾಗಿದ್ದಾಗ ಒಂದು ರಾತ್ರಿ ಬಹಳ ಗಾಬರಿಗೊಂಡು ಎದ್ದು ಕುಳಿತುಕೊಂಡು ಹೇಳಿದರು, ನಾನೊಂದು ದೀರ್ಘ ಸ್ವಪ್ನ ಕಂಡೆನು. ಕೆಲವು ಜನರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ವಿರುದ್ಧ ಆಕ್ಷೇಪ ಮಾಡುತ್ತಿದ್ದಾರೆ. ಆದರೆ ಜನರು ಉತ್ತರ ನೀಡುತ್ತಾ ಇಲ್ಲ. ಜನರು ಏಕೆ ಉತ್ತರ ನೀಡುವುದಿಲ್ಲ ಎಂಬುದರ ಬಗ್ಗೆ ಅವರು ಆತಂಕ ಭರಿತರಾಗಿದ್ದರು. ಅದೇ ಆತಂಕದಿಂದ ಅವರು ನಿದ್ರಿಸಲೂ ಇಲ್ಲ. ಅವರು ಅನೇಕ ಸಲ ಹೀಗೆ ಹೇಳುತ್ತಿದ್ದರು, ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಬಗ್ಗೆ ವಿರೋಧಿಗಳು ಹೆಚ್ಚು ದ್ವೇಷ ಹೊಂದಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ದ್ವೇಷಿಸುವುದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಖಲೀಫತುಲ್ ಮಸೀಹ್ ಸಾನಿಯವರನ್ನು ದ್ವೇಷಿಸುತ್ತಿದ್ದಾರೆ.

ಅವರ ಪುತ್ರರು ಬರೆಯುತ್ತಾರೆ, 1984ರ ವಿಷಮ ಪರಿಸ್ಥಿತಿಯ ಕಾಲದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರೂಪಿಸಿದ ಒಂದು ಸಮಿತಿಯಲ್ಲಿ ಅವರು ಸಹ ಇದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ 1984ರಲ್ಲಿ ಹಿಜ್‌ರತ್ ಮಾಡಿದಾಗ ರಬ್ವದಿಂದ ಕರಾಚಿ ತನಕ ಅವರ ಗುಂಪಿನಲ್ಲಿ ಸೇರಿದ್ದರು. ಅದೇ ರೀತಿ ಲಾಹೋರಿನಲ್ಲಿ 2010 ಮೇ 28ರಂದು ನಡೆದ ಹತ್ಯಾಕಾಂಡದ ಕಾಲದಲ್ಲಿ ಅವರ ಆರೋಗ್ಯ ಸರಿಯಾಗಿರದಿದ್ದರೂ ಎಲ್ಲಾ ವಿಷಯಗಳನ್ನು ಸರಿಯಾಗಿ ನಿಭಾಯಿಸಿದರು. ಪ್ರತಿಯೊಬ್ಬ ಶಹೀದರ ಮಯ್ಯತ್ ರಬ್ವಕ್ಕೆ ತಂದಾಗ ಆಗ ಬಹಳ ಸೆಖೆ ಇದ್ದರೂ ಸ್ವತಃ ಜನಾಝ ನಮಾಝ್ ನಿರ್ವಹಿಸಿ ದಫನ್ ಕಾರ್ಯಕ್ಕೆ ಸಹ ಹೋಗುತ್ತಿದ್ದರು. ಅವರು ಜನರ ಪದವಿಯ ಬಗ್ಗೆ ಬಹಳ ಶ್ರದ್ಧೆ ನೀಡುತ್ತಿದ್ದರು.

ಅವರ ಪುತ್ರ ಮಿರ್ಝಾ ಅದೀಲ್ ಅಹ್ಮದ್ ಬರೆಯುತ್ತಾರೆ: ನಾವು ರಬ್ವದ ಚಟುವಟಿಕೆಗಳ ಬಗ್ಗೆ ವರದಿ ಮಾಡುವಾಗ ಯಾವಾಗಲಾದರೂ ಅಜಾಗರೂಕತೆಯಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನ ನಂತರ ಕೇವಲ (ಸ) ಎಂದು ಬರೆದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರಿನೊಂದಿಗೆ ಅಲೈಹಿಸ್ಸಲಾಮ್ ಎಂದು ಪೂರ್ಣವಾಗಿ ಬರೆದರೆ ಅವರು ಅದರ ಬಗ್ಗೆ ವಿಶಿಷ್ಟ ಗಮನ ಹರಿಸಿ ಪ್ರವಾದಿಯವರ ಹೆಸರಿನೊಂದಿಗೆ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂದು ಪೂರ್ಣವಾಗಿ ಬರೆಯಬೇಕೆಂದು ನಮ್ಮ ಗಮನ ಸೆಳೆಯುತ್ತಿದ್ದರು. ಅವರು ನಮಾಝ್‌ಗಳನ್ನು ಕ್ರಮಬದ್ಧವಾಗಿ ನಿರ್ವಹಿಸುತ್ತಿದ್ದರು. ಬಹಳ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಅವರು ನಮಾಝ್‌ಗಳನ್ನು ಜಮಅ್ ಮಾಡುತ್ತಿದ್ದರು.

ಅವರು ತಮ್ಮ ಕೊನೆಯ ರೋಗಬಾಧಿತ ಸ್ಥಿತಿಯಲ್ಲಿ ಅಸ್ಪತ್ರೆಯಲ್ಲಿದ್ದಾಗ ಸಹ ಕೆಲವು ನಮಾಝ್‌ಗಳನ್ನು ಹೊರತುಪಡಿಸಿ ಎಲ್ಲಾ ನಮಾಝ್‌ಗಳನ್ನು ಸಮಯಕ್ಕೆ ಅನುಸಾರವಾಗಿ ಬೇರೆ ಬೇರೆಯಾಗಿ ನಿರ್ವಹಿಸುತ್ತಿದ್ದರು.

ಅವರು ನಾಝಿರ್ ಅಲ್‌ಲಾ ಆಗಿದ್ದರು. ನಾಝಿರ್ ಅಲ್‌ಲಾರಿಗೆ ಧಾರಾಳ ಹೊಣೆಗಾರಿಕೆಗಳಿರುತ್ತವೆ. ಅವರಿಗೆ ಜಮಾಅತಿಗೆ ಸಂಬಂಧಿಸಿದ ಮೊಕದ್ದಮೆಗಳ ಬಗ್ಗೆ ಬಹಳ ಚಿಂತೆ ಇತ್ತು. ಅವರು ಆಸ್ಪತ್ರೆಯಲ್ಲಿದ್ದಾಗ ಸಹ ಪದೇ ಪದೇ ವಿಚಾರಿಸುತ್ತಿದ್ದರು. ಇಂತಿಂತಹ ಮೊಕದ್ದಮೆಗಳ ವಿಚಾರಣೆಯ ದಿನಾಂಕ ಯಾವುದು, ಇತ್ತೀಚೆಗಿನ ಸ್ಥಿತಿ ಹೇಗಿವೆ ಎಂದೆಲ್ಲಾ ವಿಚಾರಿಸುತ್ತಿದ್ದರು. ನಾಝಿರ್ ಅಲ್‌ಲಾ ಮತ್ತು ಅಮೀರೆ ಮಕಾಮೀ ಆಗಿರುವ ಕಾರಣ ಜನರು ಸಂತೋಷ ಸಮಾರಂಭಗಳಿಗೆ ಮತ್ತು ವಿವಾಹ ಸಮಾರಂಭಗಳಿಗೆ ಆಮಂತ್ರಿಸಿದಾಗಲೆಲ್ಲಾ ಅವರು ಹೋಗುತ್ತಿದ್ದರು. ನಾನು ಹೋಗಲೇಬೇಕು ಏಕೆಂದರೆ ನಾನು ಖಲೀಫರ ಪ್ರತಿನಿಧಿಯಾಗಿದ್ದೇನೆಂದು ಹೇಳುತ್ತಿದ್ದರು. ಅದೇ ರೀತಿ ದುಃಖದ ಸಂದರ್ಭಗಳಲ್ಲೂ ಹೋಗುತ್ತಿದ್ದರು. ಅವರು ರೋಗಬಾಧಿತರನ್ನು ಮತ್ತು ಆವಶ್ಯಕತೆಗಳಿರುವವರನ್ನು ಸಂದರ್ಶಿಸುತ್ತಿದ್ದರು. ಆರೋಗ್ಯ ಸರಿಯಿಲ್ಲದಿದ್ದರೂ ತಮ್ಮ ಕಚೇರಿಗೆ ಕ್ಲಪ್ತ ಸಮಯದಲ್ಲಿ ಹಾಜರಾಗುತ್ತಿದ್ದರು ಮತ್ತು ಪೂರ್ಣಕಾಲ ಅಲ್ಲಿ ಕೆಲಸ ಮಾಡುತ್ತಿರುವುದು ಅವರ ರೂಢಿಯಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹುತಆಲಾ ರವರ ನಮಾಝೇ ಜನಾಝ ಅವರು ನಿರ್ವಹಿಸಿದರು. ಅವರ ಮಯ್ಯತ್ ಸ್ನಾನ ಮಾಡಿಸುವ ಗೌರವ ಸಹ ಅವರಿಗೆ ದೊರೆತಿತ್ತು. ಕಳೆದ ವರ್ಷ ಅವರ ಪತ್ನಿ ನಿಧನ ಹೊಂದಿದ್ದರು. ಅನಂತರ ಅವರು ಹೆಚ್ಚು ರೋಗಬಾಧಿತರಾದರು. ಅವರಿಗೆ ಮೊದಲೇ ಹೃದಯ ಸಂಬಂಧವಾದ ರೋಗಬಾಧೆಯಿತ್ತು. ಜಲ್ಸಕ್ಕೆ ಬರಲು ನಾನು ಅವರೊಂದಿಗೆ ಹೇಳಿದ್ದೆ. ಪ್ರಾಯಶಃ ಪ್ರಯಾಣ ಮಾಡಲಾರೆ ಎಂದು ಅವರು ಯೋಚಿಸುತ್ತಿದ್ದರು. ಆದರೂ ಅವರು ಜಲ್ಸಕ್ಕೆ ಆಗಮಿಸಿದ್ದರು. ಇಲ್ಲಿಗೆ ಬಂದ ನಂತರ ಅವರ ಆರೋಗ್ಯ ಸುಧಾರಿಸಿತು. ಅವರು ಬಹಳ ಉತ್ಸಾಹಭರಿತರಾಗಿದ್ದರು. ಪ್ರತಿದಿನ ರಾತ್ರಿ ನನ್ನನ್ನು ಭೇಟಿಯಾಗಲು ಬರುತ್ತಿದ್ದರು.

ಮುಕರ್ರಮ ಫೌಝಿಯ ಶಮೀಮ್ ಸಾಹಿಬ ಲಾಹೋರಿನ ಸದರ್ ಲಜ್‌ನ ಇಮಾಇಲ್ಲಾಹ್ ಆಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತ್ಯಂತ ಕಿರಿಯ ಪುತ್ರಿ ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಮ್ ಸಾಹಿಬರ ಪುತ್ರಿ. ಅವರು ಹೀಗೆ ಬರೆಯುತ್ತಾರೆ: ನಾಝಿರ್ ಅಲ್‌ಲಾ ಆದನಂತರ ಅವರ ಒಳಿತುಗಳು ಬಹಳ ಸ್ಪಷ್ಟವಾಗಿ ಕಾಣಿಸಿದುವು. ಅವರು ಅತ್ಯಂತ ವಿನಯಾನ್ವಿತರಾದ ಧಾರ್ಮಿಕ ಸೇವಕರಾಗಿದ್ದರು. ನಾನು ಅನೇಕ ಸಾರಿ ಅವರಿಗೆ ಫೋನ್ ಮಾಡಿದ್ದೆ. ಅವರು ಯಾವುದಾದರೂ ಮೀಟಿಂಗ್‌ನಲ್ಲಿದ್ದರೆ ನನಗೆ ಅನಂತರ ಫೋನ್ ಮಾಡಿ ವಿಚಾರಿಸುತ್ತಿದ್ದರು. ಅನೇಕ ಸಾರಿ ಹೇಗಾಯಿತೆಂದರೆ ಅಚಾನಕವಾಗಿ ನನ್ನ ಬಳಿಗೆ ಮರ್‌ಯಮ್ ಶಾದಿ ಫಂಡಿಗೋಸ್ಕರ ಅಪೇಕ್ಷೆ ಬಂದಾಗ ಮತ್ತು ತಕ್ಷಣದ ಬೇರೇನಾದರೂ ಆವಶ್ಯಕತೆಯ ಬಗ್ಗೆ ಅವರನ್ನು ಸಂಪರ್ಕಿಸುವಾಗ ಅವರು ಅತ್ಯಂತ ಸಮಾಧಾನಚಿತ್ತರಾಗಿ ಹೇಳುತ್ತಿದ್ದರು– ಅಮೀರ್ ಸಾಹಿಬರಿಂದ ಹಣ ಪಡೆಯಿರಿ, ಅಥವಾ ಸ್ವತಃ ವ್ಯವಸ್ಥೆ ಮಾಡಿರಿ, ನಾನು ಹಣ ಕಳುಹಿಸಿಕೊಡುವೆನು ಎಂದು ಹೇಳುತ್ತಿದ್ದರು. ಅವರು ಅತ್ಯಂತ ಅನುಕಂಪವುಳ್ಳವರಾಗಿದ್ದರು. ಅವರ ಹಾಗಿರುವ ಸಹಾನುಭೂತಿ ಭರಿತರನ್ನು ನಾನು ಕಂಡಿಲ್ಲ. ನಾನು ಅವರೊಂದಿಗೆ ಸಲಹೆ ಕೇಳಿದಾಗ ಸರಿಯಾದ ಸಲಹೆ ನೀಡುತ್ತಿದ್ದರು. ಅತ್ಯಂತ ಹೆಚ್ಚು ದುಆಗಳನ್ನು ಮಾಡುವವರಾಗಿದ್ದರು. ಅಂತಹ ಹಿರಿಯರು ಬೇರೆ ಯಾರಿದ್ದಾರೆ.

ವಕೀಲೆ ಅಲ್‌ಲಾ ತಹ್‌ರೀಕ್ ಜದೀದ್ ಚೌದರಿ ಹಮೀದುಲ್ಲಾ ಸಾಹಿಬ್ ಹೀಗೆ ಬರೆಯುತ್ತಾರೆ: ತಅ್‌ಲೀಮುಲ್ ಇಸ್ಲಾಮ್ ಕಾಲೇಜು 1954ರಲ್ಲಿ ಲಾಹೋರಿನಿಂದ ರಬ್ವಕ್ಕೆ ವರ್ಗಾಯಿಸಲ್ಪಟ್ಟಾಗ ಇಂಗ್ಲಿಷ್ ಕಲಿಸುವ ಅಹ್ಮದಿಯೇತರ ಅಧ್ಯಾಪಕ ಲಾಹೋರಿನಿಂದ ರಬ್ವಕ್ಕೆ ಬರಲಿಲ್ಲ. ಅನಂತರ ಮಿಯಾಂ ಖುರ್ಷಿದ್ ಅಹ್ಮದ್ ಸಾಹಿಬರೇ 1956ರಲ್ಲಿ ಇಂಗ್ಲಿಷ್ ವಿಭಾಗವನ್ನು ಹೊಸದಾಗಿ ವ್ಯವಸ್ಥೆಗೊಳಿಸಿದರು. ಅವರ ಇಂಗ್ಲಿಷ್ ಜ್ಞಾನ ಬಹಳ ಚೆನ್ನಾಗಿತ್ತು. ಅವರ ಕಾಲಘಟ್ಟದಲ್ಲಿ ಕಾಲೇಜಿನಲ್ಲಿ ಇಂಗ್ಲಿಷ್ ಕಲಿಸುವಿಕೆಯ ಮಟ್ಟ ಬಹಳ ಉತ್ತಮವಾಗಿತ್ತು.

ನಝಾರತ್ ಉಲ್‌ಯಾದಲ್ಲಿ ಕೆಲಸ ಮಾಡುವ ಖ್ವಾಜಾ ಮುಝಫ್ಫರ್ ಸಾಹಿಬ್ ಎಂಬ ಮುರಬ್ಬಿ ಹೇಳುತ್ತಾರೆ: ಅವರು ತಮ್ಮ ದೀರ್ಘಕಾಲದ ರೋಗಬಾಧಿತ ಸ್ಥಿತಿಯನ್ನು ಅತ್ಯಂತ ಸಹನೆಯಿಂದ ಎದುರಿಸಿದರು. ಅವರು ಒಬ್ಬ ಪಿತನಿಗಿಂತಲೂ ಹೆಚ್ಚು ಸಹಾನುಭೂತಿಯುಳ್ಳವರಾಗಿದ್ದರು. ದಯೆಭರಿತ ಹೃದಯವುಳ್ಳವರೂ ಸಮಾಜ ಸೇವೆಯ ಬಗ್ಗೆ ಅತ್ಯಂತ ಕಾಳಜಿಯುಳ್ಳವರೂ ಆಗಿದ್ದರು. ನಾನು ನನ್ನ ಅನುಭವದಿಂದ ಹೇಳುತ್ತೇನೆ, ಯಾವುದಾದರೂ ಪುರುಷ ಅಥವಾ ಮಹಿಳೆ ತಮ್ಮ ಆವಶ್ಯಕತೆಗಳನ್ನು ಸೂಚಿಸಿದಾಗ ಅವರು ಆಹಾರ ಪದಾರ್ಥ, ಮಂಚ, ಟಿ.ವಿ., ಹಾಸಿಗೆ ಹಣ ಮೊದಲಾದವುಗಳನ್ನು ಆವಶ್ಯಪಟ್ಟಾಗ ಕೂಡಲೆ ಮಂಜೂರಾತಿ ನೀಡುತ್ತಿದ್ದರು. ಕೆಲವು ಸಾರಿ ಆವಶ್ಯಕತೆಯುಳ್ಳವರು ಅಪೇಕ್ಷೆ ಸಲ್ಲಿಸಿ ಇಲ್ಲಿಂದ ಹೊರಟು ಹೋದಾಗ ನನ್ನೊಂದಿಗೆ ಹೇಳುತ್ತಿದ್ದರು, ಅವರ ಮನೆಗೆ ಹೋಗಿ ಅವರ ಸ್ಥಿತಿಯ ಬಗ್ಗೆ ವಿಚಾರಿಸಿ ನನಗೆ ತಿಳಿಸಿರಿ ಎಂದು. ನಾನು ವರದಿ ನೀಡಿದಾಗ ಅವರು ಹೇಳುತ್ತಿದ್ದರು: ಅವರಿಗೆ ಹೆಚ್ಚು ಆವಶ್ಯಕತೆ ಇದೆ. ಅವರಿಗೆ ಸಾಕಷ್ಟು ನೆರವು ನಾವು ನೀಡಿಲ್ಲ ಎಂದು. ಅತ್ಯಂತ ಪರೋಪಕಾರಿಯೂ ಸಹನೆ ತೋರುವವರೂ ಮುಗುಳುನಗೆ ಹೊಂದಿರುವವರೂ ತಪ್ಪುಗಳನ್ನು ಕ್ಷಮಿಸುವವರೂ ಆಗಿದ್ದರು. ಯಾರದಾದರೂ ದೂರನ್ನು ಆ ವ್ಯಕ್ತಿಯ ಇಚ್ಛೆ ಪ್ರಕಾರ ಪರಿಗಣಿಸದಿದ್ದರೆ ಅವರು ಅತ್ಯಂತ ಸಮಾಧಾನಚಿತ್ತರಾಗಿ ದೂರು ನೀಡಿದವನಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಅವರು ದೀರ್ಘ ಸಮಯದ ತನಕ ಸಹನೆಯಿಂದ ಮಾತುಗಳನ್ನು ಆಲಿಸುತ್ತಿದ್ದರು. ಪ್ರತಿಯೊಬ್ಬ ಹುದ್ದೇದಾರ ಈ ವಿಷಯದ ಬಗ್ಗೆ ಗಮನಹರಿಸಬೇಕು. ಇದು ಅವರ ಕರ್ತವ್ಯ ಆಗಿದೆ. ಜನರ ಮಾತುಗಳನ್ನು ಸಹನೆಯಿಂದ ಆಲಿಸುವುದಾದರೆ ಅನೇಕ ಸಮಸ್ಯೆಗಳು ಪರಿಹಾರವಾಗುವುವು ಮತ್ತು ದೂರುಗಳು ಸಹ ದೂರ ಸರಿಯುವುವು.

ಅವರ ಸ್ಮರಣೆ ಶಕ್ತಿ ಸ್ತುತ್ಯರ್ಹವಾಗಿತ್ತು. ಅವರ ಯೋಚನೆಗಳು ಗಾಢವಾಗಿದ್ದುವು. ಅವರು ನೂರಾರು ಪತ್ರಗಳನ್ನೂ ರಿಪೋರ್ಟುಗಳನ್ನೂ ಪ್ರತಿದಿನ ವೀಕ್ಷಿಸುತ್ತಿದ್ದರು. ಹಲವಾರು ಸಲ ಹೀಗೆ ಸಹ ಸಂಭವಿಸುತ್ತಿತ್ತು. ಒಂದು ವಿಷಯ ಹಲವು ತಿಂಗಳ ಹಿಂದೆ ದಾಖಲಾಗಿರುತ್ತಿತ್ತು. ಹಲವು ತಿಂಗಳ ನಂತರ, ಅಪೇಕ್ಷೆ ಸಲ್ಲಿಸಿದವರು ಅದರ ಬಗ್ಗೆ ವಿಚಾರಿಸಿದಾಗ ಕಚೇರಿಯ ಕ್ಲಾರ್ಕ್ ಅದರ ಬಗ್ಗೆ ಕಂಪ್ಯೂಟರಿನಲ್ಲಿ ನೋಡಿ ತಿಳಿಯಲು ಪ್ರಯತ್ನಿಸುತ್ತಿರುವಾಗ ಅದರ ಬಗ್ಗೆ ಏನು ತೀರ್ಮಾನ ಆಗಿತ್ತು ಎಂದು ಅವರಿಗೆ ನೆನಪಿರುತ್ತಿತ್ತು. ಅವರಿಗೆ ತನ್ನ ಕಚೇರಿಯ ಫೈಲುಗಳ ಬಗ್ಗೆ ಚೆನ್ನಾಗಿ ನೆನಪಿರುತ್ತಿತ್ತು.

ಖೂಶಾಬ್ ಜಿಲ್ಲೆಯ ಅಮೀರ್ ಮುನವ್ವರ್ ಮಜೂಕ ಸಾಹಿಬ್ ಹೇಳುತ್ತಾರೆ: ನಾನೊಂದು ಘಟನೆ ವಿವರಿಸುತ್ತೇನೆ. ಅದು ಅವರ ಘನವೆತ್ತ ವ್ಯಕ್ತಿತ್ವದ ಅಳಿಸಲಾಗದ ಅಚ್ಚೊತ್ತುತ್ತಿವೆ. 2015ರಲ್ಲಿ ನಾನು ನನ್ನ ಕಚೇರಿಯಲ್ಲಿ ಕುಳಿತಿದ್ದೆ. ಜಿಲ್ಲೆಯ ಇಬ್ಬರು ಬಡ ಮಹಿಳೆಯರು ನನ್ನ ಬಳಿಗೆ ಬಂದು ಹೇಳಿದರು ನಾಝಿರ್ ಅಲ್‌ಲಾ ಸಾಹಿಬರು ನಮ್ಮನ್ನು ನಿಮ್ಮ ಬಳಿಗೆ ಕಳುಹಿಸಿದ್ದಾರೆ. ನಮ್ಮ ಅಪೇಕ್ಷೆ ಬಗ್ಗೆ ಜಿಲ್ಲೆಯ ಅಮೀರ್ ಸಾಹಿಬರಿಂದ ಶಿಫಾರಸು ಮತ್ತು ಅವರ ಸಹಿ ಮಾಡಬೇಕೆಂದು ನಿಮ್ಮ ಬಳಿಗೆ ಕಳುಹಿಸಿದ್ದಾರೆ. ನಾನು ಅವರ ಆವಶ್ಯಕತೆ ಬಗ್ಗೆ ವಿಚಾರಣೆ ನಡೆಸಿದಾಗ ಅವರ ಆವಶ್ಯಕತೆ ಜಿಲ್ಲಾ ಮಟ್ಟದಲ್ಲೇ ಬಗೆಹರಿಸಬಹುದೆಂದು ನಾನು ತೀರ್ಮಾನಿಸಿದೆ. ಹಾಗೆ ನಾನು ಜಿಲ್ಲೆಯ ಸೆಕ್ರೆಟರಿ ಉಮೂರೆ ಆಮ್ಮರವರ ಬಳಿಗೆ ಅವರನ್ನು ಕಳುಹಿಸಿದೆ. ಅವರಿಗೆ ನೆರವು ನೀಡಲಾಯಿತು. ಮರುದಿನ ನಾಝಿರ್ ಅಲ್‌ಲಾರ ಫೋನ್ ನನಗೆ ಬಂತು. ನಿನ್ನೆ ನಾನು ಕಳುಹಿಸಿದ ಇಬ್ಬರು ಮಹಿಳೆಯರಿಗೆ ಸಹಾಯ ನೀಡುವ ಬಗ್ಗೆ ಶಿಫಾರಸು ಮಾಡದೆ ನೀವು ಅವರನ್ನು ವಾಪಾಸು ಕಳುಹಿಸಿರುವಿರೋ ಎಂದು ನನಗೆ ಆತಂಕವಿದೆ. ಅವರನ್ನು ಶಿಫಾರಸು ಸಮೇತ ನನ್ನ ಬಳಿಗೆ ಕಳುಹಿಸಿರಿ. ಆಗ ನಾನು ಹೇಳಿದೆ: ನಾವು ಅವರಿಗೆ ಇಲ್ಲೇ ನೆರವು ನೀಡಿದುದರಿಂದ ತಮ್ಮ ಬಳಿಗೆ ಕಳುಹಿಸಲಿಲ್ಲ ಎಂದು. ಅಮೀರ್ ಸಾಹಿಬ್ ಹೇಳುತ್ತಾರೆ: ಈ ಚಿಕ್ಕ ಘಟನೆ ಅವರಿಗೆ ಬಡವರ ಬಗ್ಗೆ ಇದ್ದ ಅನುಕಂಪವನ್ನು ಸೂಚಿಸುತ್ತದೆ. ಅವರ ಸಮಾಜಸೇವೆಯ ಇಂತಹ ಚಿಕ್ಕ ಘಟನೆಗಳು ಅವರ ಘನವೆತ್ತ ವ್ಯಕ್ತಿತ್ವಕ್ಕೆ ಆದರಾಂಜಲಿಗಳಾಗಿವೆ.

ಇಂತಹ ಭಾವನೆ ನಮ್ಮ ಪ್ರತಿಯೊಬ್ಬ ಹುದ್ದೇದಾರನಲ್ಲಿ ಹುಟ್ಟಬೇಕು. ಯಾವ ರೀತಿ ಕೆಲಸ ಮಾಡಬೇಕೆಂದು ಯೋಚಿಸಬೇಕು. ಯಾವುದಾದರೂ ಅಪೇಕ್ಷೆ ಬಂದರೆ ಅಪೇಕ್ಷೆ ಸಲ್ಲಿಸಿದವನು ಅದರ ಮುಂದಿನ ಕಾರ್ಯಕ್ರಮದ ಬಗ್ಗೆ ಚಿಂತಿತನಾಗಿರುತ್ತಾನೆ. ಹುದ್ದೇದಾರರು ಸಹ ಅಪೇಕ್ಷೆಯ ಆವಶ್ಯಕತೆ ಈಡೇರಿಸುವ ತನಕ ಅದರ ಬಗ್ಗೆ ಲಕ್ಷ್ಯ ನೀಡಬೇಕು. ಅವರು ಅಪೇಕ್ಷೆ ಲಭಿಸಿದ ಕೂಡಲೇ ಅದನ್ನು ಕಡೆಗಣಿಸಬಾರದು. ಇಂತಹ ಮನೋಭಾವ ನಮ್ಮ ಹುದ್ದೇದಾರರಲ್ಲಿ ಉಂಟಾಗುವುದಾದರೆ ನಾನು ಮೊದಲು ಹೇಳಿದಂತೆ ನಮ್ಮ ಅನೇಕ ಸಮಸ್ಯೆಗಳು ಕೊನೆಗೊಳ್ಳುವುವು.

ಹಾಫಿಝ್ ಮುಝಫ್ಫರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಬಾಜಮಾಅತ್ ನಮಾಝ್ ವ್ಯವಸ್ಥೆ ಬಗ್ಗೆ ಅವರ ಸುಂದರವಾದೊಂದು ಮಾದರಿ ಇತ್ತು. ಅವರು ಸದರ್ ಅನ್‌ಸಾರುಲ್ಲಾಹ್ ಆದ ನಂತರ ಪದೇ ಪದೇ ಪ್ರತಿ ಮೀಟಿಂಗ್‌ನಲ್ಲಿ ಬಾಜಮಾಅತ್ ನಮಾಝ್ ಬಗ್ಗೆ ಗಮನ ಹರಿಸುತ್ತಿದ್ದರು. ಅವರು ಹೇಳುತ್ತಿದ್ದರು: ನೀವು ಹೇಳುವಿರಿ, ಈ ವ್ಯಕ್ತಿ ಒಂದು ವಿಷಯದ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತಿದ್ದಾರೆ ಎಂದು. ಆದರೆ ನಾನೇನು ಮಾಡಲಿ, ನಾನು ನನ್ನ ಹೊಣೆಗಾರಿಕೆಯನ್ನು ಈಡೇರಿಸಬೇಕಾಗಿದೆ. ಆದುದರಿಂದ ನಾನು ಬಾಜಮಾಅತ್ ನಮಾಝ್ ಬಗ್ಗೆ ನೆನಪಿಸುತ್ತಾ ಇರಬೇಕಾಗಿದೆ. ಅದು ನನ್ನ ಕರ್ತವ್ಯ ಆಗಿದೆ. ಹುದ್ದೇದಾರರು ಇದನ್ನು ಅನುಸರಿಸಬೇಕು. ಆದರೆ ಕಂಡುಬರುವುದೇನೆಂದರೆ ಬಾಜಮಾಅತ್ ನಮಾಝ್‌ನ ಮಾತಂತೂ ಇರಲಿ, ಕೆಲವು ಸಾರಿ ಅವರು ನಮಾಝುನ್ನು ಸಹ ಬಿಟ್ಟುಬಿಡುತ್ತಿದ್ದಾರೆ.

ಮುರಬ್ಬಿಯಾಗಿರುವ ಮಲಿಕ್ ಮುಹಮ್ಮದ್ ಅಫ್‌ಝುಲ್ ಸಾಹಿಬ್ ಹೇಳುತ್ತಾರೆ: ಅವರು ಮಸ್‌ಜಿದ್‌ನಲ್ಲಿ ತಲೆತಗ್ಗಿಸಿ ಕುಳಿತುಕೊಳ್ಳುತ್ತಿದ್ದರು. ರಮಝಾನ್‌ನಲ್ಲಿ ಅಸರ್ ನಮಾಝ್ ನಂತರ ಪವಿತ್ರ ಖುರ್‌ಆನಿನ ದರ್ಸ್ ಶ್ರದ್ಧೆಯಿಟ್ಟು ಆಲಿಸುತ್ತಿದ್ದರು. ಯಾರಾದರೂ ಅವರ ಬಳಿ ತನ್ನ ಸಮಸ್ಯೆ ಹೇಳಿದರೆ ಅವರು ಅದನ್ನು ಶ್ರದ್ಧೆಯಿಟ್ಟು ಆಲಿಸಿ ಸಮಸ್ಯೆಗೆ ಪರಿಹಾರ ಸೂಚಿಸುತ್ತಾ ಇದ್ದರು. ರಬ್ವದ ನಿವಾಸಿಗಳು ಇವುಗಳನ್ನು ವೀಕ್ಷಿಸುತ್ತಿದ್ದರು. ನಾನು ರಬ್ವದ ಜಾಮಿಅದಲ್ಲಿ ಕಲಿಯುತ್ತಿದ್ದಾಗ ನಾನು ಬಹಳ ಗಾಬರಿಗೊಂಡ ಒಂದು ಸಂದರ್ಭ ತಲೆದೋರಿತು. ಪರಿಹಾರ ನನಗೆ ತೋಚುತ್ತಿರಲಿಲ್ಲ. ನಾನು ಕೊನೆಯ ಪ್ರಯತ್ನವಾಗಿ ಪ್ರಾರ್ಥಿಸುತ್ತಿದ್ದೆ. ನಾನು ಮುಕರ್ರಮ್ ಖುರ್ಷಿದ್ ಅಹ್ಮದ್ ಸಾಹಿಬರನ್ನು ಭೇಟಿ ಮಾಡಲು ಹೋದೆ. ಬಿಡುವಿಲ್ಲದ ಕೆಲಸದ ಮಧ್ಯೆಯೂ ಅವರು ನನಗೆ ಭೇಟಿಗೆ ಸಮಯ ನೀಡಿದರು. ಅವರು ನನ್ನ ಸಮಸ್ಯೆ ಸಹನೆಯಿಂದ ಆಲಿಸಿದರು. ಅತ್ಯಂತ ಸಹಾನುಭೂತಿಯಿಂದ ವರ್ತಿಸಿದರು. ನಾನು ಅವರ ಕಚೇರಿಯಿಂದ ಹೊರಗೆ ಬಂದಾಗ ನನ್ನ ಭಾರ ಹಗುರವಾದಂತೆ ನನಗೆ ಭಾಸವಾಯಿತು. ನನ್ನ ಹೃದಯದಲ್ಲಿ ಹೊಸ ಆಶೆ ಉಂಟಾಯಿತು. ಪ್ರತಿಯೊಬ್ಬ ಹುದ್ದೇದಾರ ಈ ರೀತಿ ಜನರಿಗೆ ಸಾಂತ್ವನವನ್ನು ನೀಡುವವರಾಗಬೇಕು.

ಬದೋಮಲ್‌ಹಿಯ ಮುರಬ್ಬಿ ಮಸ್‌ಊದ್ ಸಾಹಿಬ್ ಹೇಳುತ್ತಾರೆ: ಮಿಯಾಂ ಸಾಹಿಬರನ್ನು ಅನೇಕ ಸಾರಿ ಸಂದರ್ಶಿಸಿದ್ದೆ. ಪ್ರತಿಯೊಂದು ಭೇಟಿ ಪ್ರೀತಿ ವಾತ್ಸಲ್ಯಗಳ ಸಮುದ್ರವಾಗಿತ್ತು. ಅವರು ಪ್ರತಿಯೊಬ್ಬರಿಗೆ ಪ್ರಿಯರಾದವರು ಮತ್ತು ಪ್ರೀತಿಸುವವರಾಗಿದ್ದರು. ಅವರದು ಅತ್ಯಂತ ವಾತ್ಸಲ್ಯ ಭರಿತ ಸ್ವಭಾವಗುಣವಾಗಿತ್ತು. ಅವರು ವಿನಯದ ಸಾಕಾರವಾಗಿದ್ದರು. ಅವರನ್ನು ಸಂದರ್ಶಿಸಲು ಆಗಮಿಸಿದವರನ್ನು ಎದ್ದು ನಿಂತು ಸ್ವಾಗತಿಸಿ ಹಸ್ತಲಾಘವ ನೀಡುತ್ತಿದ್ದರು. ಅವರನ್ನು ಭೇಟಿಯಾಗಲು ಒಬ್ಬ ಬಾಲಕ ಬಂದರೂ ಅವರು ಅತ್ಯಂತ ಶ್ರದ್ಧೆಯಿಟ್ಟು ಮಾತುಗಳನ್ನು ಆಲಿಸುತ್ತಿದ್ದರು ಮತ್ತು ಅವರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಆದುದರಿಂದ ಪ್ರತಿಯೊಬ್ಬರು ಅವರ ಬಳಿಗೆ ದೂರನ್ನು ಒಯ್ಯುತ್ತಿದ್ದರು.

ಪ್ರತಿಯೊಬ್ಬರು ಅವರ ಕುರಿತು ಹೀಗೆ ಬರೆದಿದ್ದಾರೆ: ಅವರು ಕಚೇರಿಯಲ್ಲಿ ಬಡವ, ಶ್ರೀಮಂತ, ಅಮೀರ್, ಹುದ್ದೇದಾರ, ಸಾಮಾನ್ಯ ಅಹ್ಮದಿ ಹೀಗೆ ಪ್ರತಿಯೊಬ್ಬರೊಂದಿಗೆ ಸಮಾನವಾಗಿ ವರ್ತಿಸುತ್ತಿದ್ದರು. ಪ್ರತಿಯೊಬ್ಬನಿಗೆ ಸಂಬಂಧಿಸಿ ತಕ್ಷಣ ಕಾರ್ಯನಿರ್ವಹಿಸುತ್ತಿದ್ದರು. ಆ ವ್ಯಕ್ತಿ ಬಹಳ ಪ್ರಮುಖನೋ ಎಂಬಂತೆ.

ನಾನು ಕೆಲವು ವರ್ಷಗಳ ಹಿಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೌಟುಂಬಿಕ ಸಂಬಂಧ ಹೊಂದಿದವರಿಗೆ ಒಂದು ಪತ್ರ ಬರೆದು ಅವರ ಹೊಣೆಗಾರಿಕೆಗಳ ಬಗ್ಗೆ ಅವರಲ್ಲಿ ಪ್ರಜ್ಞೆ ಮೂಡಿಸಿದ್ದೆನು. ನನಗೆ ಕೆಲವು ದೂರುಗಳು ಲಭಿಸಿದ್ದುವು. ಅವುಗಳನ್ನು ದೂರೀಕರಿಸಲು ನಾನು ಸಾಮಾನ್ಯವಾಗಿ ಎಲ್ಲರಿಗೂ ಸೂಚಿಸಿದ್ದೆ. ಪಾಕಿಸ್ಥಾನಕ್ಕೂ ಆ ಪತ್ರ ಕಳುಹಿಸಿ ನಾನು ಅವರಿಗೆ ತಿಳಿಸಿದೆ ಅಲ್ಲಿರುವ ಕುಟುಂಬದ ಸದಸ್ಯರನ್ನು ಜಮಾಯಿಸಿ ಈ ಪತ್ರ ಓದಿ ಹೇಳಬೇಕೆಂದು. ಆ ಪತ್ರವನ್ನು ಕುಟುಂಬದ ಸದಸ್ಯರ ಮುಂದೆ ಓದಿದಾಗ ಅವರು ಭಾವಾವೇಶ ಭರಿತರಾಗಿ ಹೇಳಿದರು: ನನ್ನ ಮಕ್ಕಳು ಸಹ ಇಂತಹ ಕುಂದುಕೊರತೆಗಳಿಂದ ಮುಕ್ತರಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ನಾನು ಅವರಿಗೂ ಅವರ ಮಕ್ಕಳಿಗೂ ಉಪದೇಶಿಸುತ್ತೇನೆ, ಈ ಕುಂದುಕೊರತೆಗಳನ್ನು ನಾವು ದೂರಸರಿಸಬೇಕು. ಖಲೀಫರು ನಮ್ಮಿಂದ ಪ್ರತೀಕ್ಷಿಸುವುದನ್ನು ಈಡೇರಿಸಲು ನಾವು ಸದಾ ಪ್ರಯತ್ನಿಸುತ್ತಿರಬೇಕು.

ಇದು ಅವರ ಸತ್ಯ ಮತ್ತು ತಖ್ವದ ಮಟ್ಟವಾಗಿತ್ತು. ಅಲ್ಲಾಹನು ಅವರ ಸಂತಾನಕ್ಕೆ ಈ ಒಳಿತುಗಳನ್ನು ಸ್ಥಿರವಾಗಿ ಕಾಪಾಡಲು ಭಾಗ್ಯ ನೀಡಲಿ. ಅಲ್ಲಾಹನು ಜಮಾಅತಿಗೆ ಮತ್ತು ಖಿಲಾಫತ್‌ಗೆ ನಿಷ್ಠಾವಂತರಾದ ತಖ್ವದಲ್ಲಿ ವರ್ತಿಸುವ ಸಹಾಯಕರು ಮತ್ತು ಕಾರ್ಯಕರ್ತರು ಲಭಿಸುವಂತೆ ಅನುಗ್ರಹಿಸಲಿ. ಮಿರ್ಝಾ ಅನಸ್ ಅಹ್ಮದ್ ಸಾಹಿಬ್ ಬರೆದಿದ್ದಾರೆ: ಸಹೋದರ ಖುರ್ಷಿದ್ ತನ್ನ ಜೀವನವಿಡೀ ಖಿಲಾಫತಿನ ಪಾದಗಳಲ್ಲಿ ಕುಳಿತು ಕೊನೆಯುಸಿರು ತನಕ ಜಮಾಅತಿಗೆ ಸೇವೆ ಸಲ್ಲಿಸಿದರು. ಅಲ್ಲಾಹನು ಅವರ ಪದವಿ ಉನ್ನತಗೊಳಿಸಲಿ. ಅವರ ಸೇವೆಗಳನ್ನು ಸ್ವೀಕರಿಸಲಿ. ಅಸಂಖ್ಯಾತ ಅನುಗ್ರಹಗಳ ನೆರಳಿನಲ್ಲಿ ಅವರನ್ನು ಇರಿಸಲಿ. ಅವರು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿದರು ಎಂದು ಬರೆದಿದ್ದಾರೆ.

ಅವರು ಬರೆದದ್ದು ಸಂಪೂರ್ಣ ಸರಿಯಾಗಿದೆ. ನಿಶ್ಚಯವಾಗಿಯೂ ಮೃತರು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿ ಅಗಲಿ ಹೋದರು. ಅಲ್ಲಾಹನು ನಮಗೆಲ್ಲರಿಗೂ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲು ಮತ್ತು ನಿಭಾಯಿಸಲು ಭಾಗ್ಯವನ್ನು ದಯಪಾಲಿಸಲಿ. ನಮಾಝ್ ನಂತರ ಅವರ ನಮಾಝ್ ಜನಾಝ ಗಾಯಿಬ್ ಸಹ ನಿರ್ವಹಿಸುವೆನು – ಇನ್‌ಶಾ ಅಲ್ಲಾಹ್.

*****


***Friday Sermon delivered by Hadrath Khaleefatul Masih Al Khamis***(atba)

*At Masjid Baithul Futhuh, London. on 19-01-2018.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon